ಇದ್ದಕ್ಕಿದ್ದಂತೆ ಜ್ಯಾಕಲಿನ್‌ಳ ಮಾತು ಕೇಳಿಸಿತು. ದುಃಖವೊತ್ತಟ್ಟರಿಸಿ ನಸುನಕ್ಕೆ. ನಮ್ಮನ್ನೇ ಹುಡುಕಿಕೊಂಡು ಬಂದಿದ್ದಳು. ಅಲೇಕ್ಸ್ಯನೇ ಹೇಳಿಕಳಿಸಿದನೋ, ಹೇಗೆ?! 'ಏನಿಲ್ಲ... ನನ್ನ ಮನೆಯದೇನೋ ಟೆನ್ಷನ್ನು ಅಷ್ಟೆ... ಹಾಗಾಗಿ ಇಲ್ಲಿ ಬಂದಿವಿ...' ಚಿಂತೆ ಬದಿಗಿರಿಸುತ್ತ ಹೇಳಿ, ಪುನಃ ನಕ್ಕೆ. 'ಏನು ಬಂದಿದ್ದು?' ವಿಚಾರಿಸಿಕೊಂಡೆ. 'ಹೇಳದೆ ಹೊರಟುಬಿಟ್ಟರೇನೋ ಅಂತ ನೋಡಲಿಕ್ಕೆ ಬಂದೆ... ಊಟ ಮಾಡಿಕೊಂಡೇ ಹೋಗಿ ಆಯಿತಾ? ಹಾಗೇ ನಮ್ಮ ಸರ್ರಿಗೆ ವಿಷ್ ಮಾಡೋಕೆ ಮರೀಬೇಡಿ... ಇಷ್ಟು ವಯಸ್ಸಾದ ಮೇಲೆ ಮದುವೇಂತ ಒಂದು ಆಗುತಿದ್ದಾರೆ. ಎಷ್ಟು ಖುಷಿಯ ವಿಷಯ ಅಲ್ಲವಾ?!' ಜ್ಯಾಕಲಿನ್ ಸಡಗರಿಸಿದ ಪರಿ ನೋಡಿದರೆ, ಅಲೇಕ್ಸ್ಯ ವರಿಸುತ್ತಿರುವ ಕನ್ನೆಯ ವಯಸ್ಸಾಗಲಿ, ಇಬ್ಬರ ನಡುವಿನ ವಯಸ್ಸಿನಂತರವಾಗಲಿ — ಅವಳನ್ನು ತುಸುವಾದರೂ ಕಾಡಿದೆಯೆಂದನಿಸಲಿಲ್ಲ. ತನ್ನದೇ ಸ್ವಂತವೆಂಬಷ್ಟು ಉಮೇದಿನಿಂದ ಸಂದರ್ಭವನ್ನೊಳಗೊಂಡು ಖುಷಿಸುತ್ತಿದ್ದಾಳನ್ನಿಸಿತು. ಅಥವಾ, ವಿಷಯ ತಿಳಿಯುತ್ತಲೇ ಆದ ಆಘಾತವನ್ನು ಮೀರಿದ ಮತ್ತು ಹಕೀಕತನ್ನು ಸರ್ವೇಸಾಮಾನ್ಯವೆಂದು ಒಪ್ಪಿಕೊಂಡ ಬೇರಿನ್ನೊಂದೇ ಆಯಾಮದಲ್ಲಿದ್ದಾಳೆಯೆ? ಅಜೀಬನ್ನಿಸಿತು.

'ಇರುತೀವಿ... ಊಟ ಮಾಡಿಕೊಂಡೇ ಹೋಗುತೀವಿ...' ಮಧುಕರಿ ಉತ್ತರಿಸಿದ.

ದೊಡ್ಡ ಬಾಯಿಯ ಮತ್ತು ಅಷ್ಟೇ ದೊಡ್ಡ ದೊಡ್ಡ ಹಲ್ಲುಗಳ ಜ್ಯಾಕಲಿನ್ ಕಿವಿಯಿಂದ ಕಿವಿಗೆ ನಗುವರಳಿಸಿ ನಕ್ಕು, ಸರಿದುಸಂದವಳು ಒಂದೆರಡು ಮಿನಿಟಿಗೆಲ್ಲ ವಾಪಸಾಗಿ, 'ಸುಮೋದಿನಿ ಮೇಡಂ... ನಮ್ಮ ಸರ್ ಹೇಳಿದ್ದಾರೆ: ನೀವು ಅವರಿಗೆ ಹೇಳದೆ ಮನೆಗೆ ಹೋಗೋ ಹಾಗಿಲ್ಲವಂತೆ. ನಿಮ್ಮ ಜತೆ ಏನೋ ಮಾತಾಡೋದಿದೆಯಂತೆ...' ಅಂತಂದು, ನಾನು ಯೆಸ್ಸನ್ನುವವರೆಗೂ ಕಾದು, ಆ ಬಳಿಕವಷ್ಟೇ ಬಾಲ್ಕನಿಯ ಬಾಗಿಲು ದಾಟಿ ಮರೆಯಾದಳು.

'ನೋಡಿದೆಯಾ, ಮೋದ್... ಇಲ್ಲಿರುವ ಯಾರನ್ನೂ ಈ ವಯಸ್ಸಿನ ವಿಷಯ ನಿನ್ನ ಕಾಡುವಷ್ಟು ಕಾಡುತಿಲ್ಲ ಅನಿಸುತ್ತೆ...' ಮಧುಕರಿ, ಜ್ಯಾಕಲಿನ್ ವಾಪಸು ಹೋದ ಬೆನ್ನಿನಲ್ಲಿಯೇ, ಸಣ್ಣದನಿಯಲ್ಲಿ ಹೇಳಿದ. ಏನೂ ತೋಚದೆ ಸುಮ್ಮನಾದೆ. ಸುಮ್ಮನಾದೆನೆಲ್ಲಿ, ಐಕ್ಯಾಳ ಮೆಸೇಜಿಗೆ, ಮಧುಕರಿಯ ಮೊಬೈಲಿನಲ್ಲಿಯೇ — 'ನಮ್ಮೊಡನೆ ಮಾತನಾಡದೆ ಯಾವುದೇ ಬೇಜವಾಬ್ದಾರಿಯ ನಿರ್ಧಾರ ಕೈಕೊಳ್ಳಬೇಡ. ನೀನೂ ಎರಡು ಮಕ್ಕಳ ತಾಯಿ ಅನ್ನೋದದನ್ನ ಮರೀಬೇಡ....' ಎಂದೊಂದು ಉತ್ತರವನ್ನು ಕೀಲಿಸಿ, ಕಡೆಯಲ್ಲಿ 'ನಿನ್ನಮ್ಮ ಸುಮೋದ್" ಎಂದು ಬರೆದವಳು, ಕಳಿಸುವ ಮುನ್ನ ಅದನ್ನು ಅಳಿಸಿ, ಒಂದೆರಡು ಕ್ಷಣ ತಡೆದು, ಯೋಚಿಸಿ, ಹೆಸರಿರದಿರುವುದೇ ಲೇಸೆಂದು 'ಸೆಂಡ್" ಮಾಡಿದೆ. ಆ ಬಳಿಕದ ಕ್ಷಣಕ್ಕೆಲ್ಲ, ಕ್ಷಣಕ್ಷಣವೂ ಯುಗದಂತನಿಸಗೊಡುವ ಆತಂಕವನ್ನು ಹತ್ತಿಕ್ಕಲಾಗದೆ, ಮಧುಕರಿಯ ಮೊಬೈಲಿನಿಂದಲೇ ಐಕ್ಯಾಳಿಗೆ ಕರೆಮಾಡಿದೆ. ಉತ್ತರಿಸಲಿಲ್ಲ. ಮರಳಿ ಡಯಲಿಸಿದೆ. ಉಹ್ಞೂಂ... ಪ್ರಯೋಜನವಾಗಲಿಲ್ಲ. ನನ್ನ ಮೊಬೈಲಿನಿಂದಲೂ ಪದೇಪದೇ ಕರೆಯಹತ್ತಿದೆ. ಕಡೆಗೆ ಬೇಸತ್ತು ಸುಮ್ಮಗಾದೆ. ಸುಮ್ಮಗಾಗದೆ ಕಾದೆ.

★★★

'ಹೊರಟುಬಿಡೋಣವಾ, ಮಧೂ? ನನಗಿನ್ನು ಇಲ್ಲಿರೋದು ಕಷ್ಟ...' ಚಡಪಡಿಸಿಕೊಂಡು ಹೇಳಿದೆ. ಮಧುಕರಿಗೆ ಮೊದಲಿದ್ದ ಅವಸರ ಈಗಿರಲಿಲ್ಲ! 'ಇಷ್ಟು ಹೊತ್ತಿದ್ದ ಮೇಲೆ, ಹಾಗೇ ಹೋಗೋದು ಸರಿ ಅನಿಸಲ್ಲ... ಅಲೇಕ್ಸ್ಯನಿಗೆ ಹೇಳಿ ಹೋಗಬೇಕಲ್ಲವಾ?' ಅಂತಂದ! 'ನಿನ್ನ ಮಟ್ಟಿಗೆ ಯಾವುದು ಸರಿಯೋ, ಯಾವುದು ತಪ್ಪೋ... ಅರ್ಥವೇ ಆಗಲ್ಲ, ಮಧು...' ಖಡಕ್ಕಾಗಿ ಕನಲಿದೆ.